ಇ. ಮುಂದಿನ 5 ವರ್ಷಗಳಲ್ಲಿ ರೂ. 1096 ಕೋಟಿ ರೂಪಾಯಿ ಬರಲಿದೆ. ಆನ್‌ಲೈನ್ ಲಾಟರಿ ನಿಲ್ಲಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

Single digit lottery

163(396) Sri Patil Siddalinganagowda Siddangoda; (Mundaragi)

1. Whether it is a fact that Government had stopped single digit lottery in the State? What are the reasons to stop the single digit lottery;

2. What are the reasons for giving permission to commence online lottery in the state?

Sri. Bhabu Rao. Basavanappa chinchasuir (Minister of State for small Savings and State Lottery and Insurance.

1. The Latteries Regulation Act, does not permit Single Digit Lotteries.

2. In order to angment the revenue to the State and to bring transparentcy in the lottery trade and alos to provide job opportunities to the educated unemployed, permission was given to commence Computerized Network Lottery in the State.

ಬೆಳ್ತಂಗಡಿ ತಾಲ್ಲೂಕು ಪ್ರದೇಶದ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ

164(194) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳ್ತಂಗಂಡಿ ತಾಲ್ಲೂಕಿನ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ಅವುಗಳಲ್ಲಿ ಎಷ್ಟು ಕೆರೆಗಳು ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ನಿರ್ಧರಿಸಿದೆ;

ಆ. ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ತಾಲ್ಲೂಕಿನಲ್ಲಿ ಕೈಗೊಳ್ಳಲಿರುವ ಕೆಲಸ ಕಾರ್ಯಗಳ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಬೆಳ್ತಂಗಡಿ ತಾಲ್ಲೂಕಿನ ಪ್ರದೇಶ ವ್ಯಾಪ್ತಿಯಲ್ಲಿ ಸ.ನೀ.ಇಲಾಖೆಯಲ್ಲಿ ಯಾವುದೇ ಕೆರೆಗಳು ನಿರ್ವಹಣೆಯಲ್ಲಿ ಇರುವುದಿಲ್ಲ. ಆದರೆ ರೈತ ಕಾಯಕ ಕೆರೆ ಯೋಜನೆ ಅಡಿ ಪ್ರತಿ ಮತ ಕ್ಷೇತ್ರಕ್ಕೊಂದು ಕೆರೆಯನ್ನುಹೊಳೆತ್ತುವ ಅಂಶ ಒಳಗಂಡಂತೆ ಸಮಗ್ರ ಅಭಿವೃದ್ಧಿಪಡಿಸುವ ಕಾರ್ಯಕ್ರಮಗದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸೇರಿದ ಬೆಳ್ತಂಗಡಿ ತಾಲ್ಲೂಕಿನ ಗುರುವಾಯನ ಕೆರೆಯ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಆ. 2002-03ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸ,ನೀ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಶೀರ್ಷಿಕೆ	ಅಂದಾಜು ಮೊತ್ತ	ಷರಾ
1	ತೆಂಕಕಾರಂದೂರು ಎಂಬಲ್ಲಿ ಕಿಂಡಿಅಣೆಕಟ್ಟೆ ನಿರ್ಮಾಣ	4702-ಅಣೆಕಟ್ಟೆ	37.00	ಕೆಲವು ಮಂದಿ ಸಾರ್ವಜನಿಕರ ಪ್ರತಿಭಟನೆಯಿಂ-ದ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗಿಲ್ಲ.
2	ಕಡಿರುದ್ಯಾವರ ಗ್ರಾಮದ ಒಳಂಬ್ರಎಂಬಲ್ಲಿ ಕಿಂಡಿ ಅಣೆಕಟ್ಟೆ ನಿರ್ಮಾಣ	-ಅದೇ-	21.00	ಕಾಮಗಾರಿಯು ಮುಗಿಯುವ ಹಂತದಲ್ಲಿದೆ.
3.	ಮುಂಡಾಜ್ ಕಿಂಡಿ ಅಣೆಕಟೆಯ ಅಭಿವೃದ್ದಿ ಕಾಮಗಾರಿ	-ಅದೇ-	4.00	ಕಾಮಗಾರಿ ಪ್ರಾರಂಭಿಸಬೇಕು.
4.	ರೈತ ಕಾಯಕಕೆರೆ ಯೋಜನೆಯಡಿ ಗುರುವಾಯನ ಕೆರೆ ಅಭಿವೃದ್ದಿ	4702-ರೈತ ಕಾಯಕ ಕೆರೆ	7.00	ಟೆಂಡರ್ ಅನುಮೋದನೆ ಪರಿಶೀಲನೆಯಲಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಬೆಳ್ತಂಗಡಿ ಕ್ಷೇತ್ರದ ಪೊಲೀಸ್ ಠಾಣೆಗಳ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳ ವ್ಯವಸ್ಥೆ

166(196) ಶ್ರೀ ಪ್ರಭಾಕರ ಬಂಗೇರ .ಕೆ(ಬೆಳ್ತಂಗತಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳ ಎಲ್ಲಾ ಪೊಲೀಸ್ ಸಿಬಂದಿ ವರ್ಗದವರಿಗೆ ವಸತಿ ವ್ಯವಸ್ಥೆ ಇಲ್ಲದಿರುವುದನ್ನು ಸರ್ಕಾರವು ಗಮನಿಸಿದೆಯೇ: ಗಮನಿಸಿದ್ದಲ್ಲಿ ಕೊರತೆ ಇರುವ ವಸತಿ ಗೃಹಗಳನ್ನು ಯಾವಾಗ ಒದಗಿಸಿಕೊಡಲಾಗುವುದು.

ಆ. ಬೆಳ್ತಂಗಡಿ ತಾಲ್ಲೂಕಿನ ಅಗ್ನಿಶಾಮಕ ದಳದ ಕಛೇರಿಗೆ ಸ್ವಂತ ಕಟ್ಟಡ ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿಗೃಹ ಸೌಲಭ್ಯಗಳು ಇಲ್ಲವಾಗಿದ್ದು ಸದರಿ ಸೌಲಭ್ಯವನ್ನು ಒದಗಿಸಿಕೊದಲು ಕ್ರಮ ಜರುಗಿಸಲಾಗುವುದೆ.

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಸಚಿವರು)

ಅ. ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲಾ ಪೊಲೀಸ್ ಸಿಬ್ಬಂದಿವರ್ಗದವರಿಗೆ ವಸತಿ ಗೃಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 2003-04ನೇ ಸಾಲಿನ ಆರ್ಥಿಕ ಯೋಜನೆಯಡಿಯಲ್ಲಿ ಬಿಡುಗಡೆ ಆಗಿರುವ ಅನುದಾನದಲ್ಲಿ ಬೆಳ್ತಂಗಡಿ ಮತ್ತು ವೇಣೂರು ಪೊಲೀಸ್ ಠಾಣೆಗಳ ವಸತಿ ರಹಿತ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.ಬೆಳ್ತಂಗಡಿ ತಾಲ್ಲೂಕು ಕಸಬಾಸರ್ವೆ ನಂ.91 ಎ2 ರಲ್ಲಿ 2.73 ಎಕರೆ ಜಮೀನು ಲಭ್ಯವಿರುತ್ತದೆ. ವೇಣೂರು ಹೋಬಳಿಯ ಸರ್ವೆನಂ. 26:1 ಎಸ್‌ರಲ್ಲಿ ಎಕರೆ